ಓ ಎಸ್ ನಂಃ 343/2021

ಪಿ. ಡಬ್ಲ್ಯೂ ಃ 1

ದಿಃ 25.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್ ಆರ್ ಎಸ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ದಿನಾಂಕ ಃ 03.06.2010 ರಂದು ಆದ ಕ್ರಯದ ಕರಾರನ್ನು ಕೊಟ್ಟಿದ್ದು ಅದನ್ನು ನಿಶಾನೆಗೊಳಿಸಲು ಪ್ರತಿವಾದಿ ಪರ ವಕೀಲರು ಆಕ್ಷೇಪಣೆ ವ್ಯಕ್ತಪಡಿಸಿದ್ದು, ಅದು ಕಡಿಮೆ ಛಾಪಾ ಕಾಗದದ ಮೇಲೆ ಬರೆದಿದ್ದು ಮತ್ತು ಕಡ್ಡಾಯವಾಗಿ ನೋಂದಣಿಯಾಗಬೇಕಾದ ದಾಖಲೆ ಇರುವುದರಿಂದ ನಿಶಾನೆಗೊಳಿಸಲು ತಕರಾರು ಮಾಡಿರುತ್ತಾರೆ. ವಾದಿ ಪರ ವಕೀಲರು ಸ್ಟ್ಯಾಂಪ್ ಡ್ಯೂಟಿ ಕೊಡುವುದಾಗಿ ಹೇಳಿರುವುದರಿಂದ ಆ ದಾಖಲೆಯನ್ನು ತಕರಾರಿಗೆ ಒಳಪಟ್ಟು ನಿ ಪಿ 1 ಎಂದು, ಅದಕ್ಕೆ ಪ್ರತಿವಾದಿಗಳ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿ ಪಿ 1 ಎ ದಿಂದ ನಿ ಪಿ 1 ಇ ಎಂದು,ಸಾಕ್ಷಿದಾರರ ಸಹಿಗಳನ್ನು ಸಾಕ್ಷಿ ಗುರುತಿಕಸಿದ್ದು ಅವುಗಳನ್ನು ನಿ ಪಿ 1 ಎಫ್ ದಿಂದ ನಿ ಪಿ 1 ಐ ಎಂದು, ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 1 ಜೆ ಎಂದು, ಆರ್ ಟಿ ಸಿ ಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಪಿ 2 ಮತ್ತು ನಿ ಪಿ 3 ಎಂದು, ಲೀಗಲ್ ನೋಟೀಸ್ ನ ಆಫೀಸ್ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿಪಿ 4 ಎಂದು, ಅಂಚೆ ರಶೀದಿಗಳನ್ನು ಕೊಟ್ಟಿದ್ದು ಅವುಗಳನ್ನು ನಿಪಿ 5 ರಿಂದ ನಿ ಪಿ 9 ಎಂದು, ಜಾರಿಯಾಗದೆ ವಾಪಸ್ ಬಂದ ಅಂಚೆ ಕವರ್ ಗಳನ್ನು ನಿಪಿ 10 ರಿಂದ ನಿ ಪಿ 14 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರಿದ್ದು ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.